**ಸಾಕ್ಷಿಯನ್ನು ಕರೆಸಲಾಯಿತು** **ಪ್ರಮಾಣ ವಚನ ಮಾಡಿಸಲಾಯಿತು**

**ದಿಃ23-07-2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಆರ್ನೆಸ್ ಕಂಪನಿಯಲ್ಲಿ ಭೂ ಮಾಪಕನಾಗಿ ಕೆಲಸ ಮಾಡಿರುತ್ತೇನೆ. ದಾವ ಆಸ್ತಿ ಸ ನಂ 15 ರಲ್ಲಿ 2 ಎಕರೆ ಇರುತ್ತದೆ. ಸ ನಂ 15 ರ ಕಂದಾಯ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸ ನಂ 15 ರಲ್ಲಿ ನನಗಾಗಲೀ, ನನ್ನ ತಂದೆಗಾಗಲೀ ಅಥವಾ 1 ನೇ ಪ್ರತಿವಾದಿಗಾಗಲೀ ಪಹಣಿ ಇರುವುದಿಲ್ಲ. ಸ ನಂ 15 ರಲ್ಲಿ ನಮಗೆ ಆಸ್ತಿ ಮಂಜೂರಾಗಿಲ್ಲ. ಆದರೆ ನಮೂನೆ 53 ರಲ್ಲಿ ಅರ್ಜಿ ಸಲ್ಲಿಸಿದ್ದು, ನಾವು ಜಮೀನಿನ ಸಾಗುವಳಿ ಮಾಡುತ್ತಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಸಾಗುವಳಿ ಮಾಡುತ್ತಿರುವ ಬಗ್ಗೆ ನಕಾಶೆ ಮತ್ತು ಆರ್ ಐ ವರದಿ ಯನ್ನು ಹಾಜರುಪಡಿಸಿರುತ್ತೇನೆ. ನಾನು ಭೂಮಾಪಕನಾಗಿ ಕೆಲಸ ಮಾಡಿರುವುದರಿಂದ ಅವುಗಳನ್ನು ಸೃಷ್ಠಿಸಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಈ ದಾವೆಯಲ್ಲಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

ನಾನು ಮತ್ತು 1 ನೇ ಪ್ರತಿವಾದಿ ದಿ 26.06.2023 ರಂದು ದಾವ ಆಸ್ತಿಯ ಬಳಿ ಬಂದು ಗಲಾಟೆ ಮಾಡಿರುತ್ತೇವೆಂದರೆ ಸರಿಯಲ್ಲ. ವಾದಿ ದಾವ ಆಸ್ತಿಯಲ್ಲಿ ಜೋಳ ಮತ್ತು ಕಾಫಿ ಬೆಳೆದಿರುತ್ತಾರೆಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ವಾದಿಗೆ ಹಕ್ಕು ಮತ್ತು ಸ್ವಾಧೀನ ಇದ್ದರು ನಾವು ಅವರ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೇವೆಂದರೆ ಸಾಕ್ಷಿ ವಾದಿ ನಕಲು ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**